ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 25, ಸ್ಯೆ॥ 1884.

ಗಮನ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಾಲ್ ತರಫ್.

1884ನೇ ಇಸವಿ ರೂಲಾಫ್ ಪ್ರಾಕ್ಟಿಸ್ ನಂಬರ್ 34.

ಪೊಲೀಸಿನವರಿಗೆ ಯೆಖ್ತ್ಯಾರಿ ಯಿಲ್ಲದೆ ಯಿರುವ ಬಂದು ಕೃತ್ಯದ ಫಿರಿಯಾದನ್ನ ಮಾಜಿಸ್ಟ್ರೇಟರು ಅಂಗೀಕರಿಸಿದಾಗ್ಯೆ ಬಂದು ಸರಿಯಾದ ಕಾಲದ ಒಳಗಾಗಿ ಪ್ರೊಸೆಸ್ ಫೀ ಕಟ್ಟಬೇಕೆಂದು ಅವರು ಗೊತ್ತು ಮಾಡಬೇಕು, ಆ ವಾಯಿದೆ ಒಳಗಾಗಿ ಫೀಜ್ ಕೊಡದೆ ಹೋದಲ್ಲಿ ಕ್ರಮವಾದ ಡಿಸ್‌ಮಿಸಲ್ ಆರ್ಡರ್ ಬರಿಯುವದಕ್ಕೆ ಬದ್ಧಲಾಗಿ ಫಿರ್ಯಾದನ್ನ ವಜಾ ಮಾಡತಕ್ಕ ವಿಷಯದಲ್ಲಿ ಮಾಜಿಸ್ಟ್ರೇಟರು ತಮ್ಮ್ಯೆ ಯುಕ್ತಾನುಸಾರ ನ್ಯಸಬಹುದೆಂದು ಚೀಫ್ ಕೋರ್ಟ್‌ನವರು ಹುಕುಂ ಮಾಡುತ್ತಾರೆ.

2. ಪ್ರೈವೇಟ್ ಜನ ಯಾನೆ ಕಕ್ಷಿಗಾರನ ಪ್ರಾರ್ಥನೆ ಯಿಲ್ಲದೇನೆ ಮಾಜಿಸ್ಟ್ರೇಟರು ತಾವಾಗಿ ಕೊಡುವ ಯಲ್ಲ ಪ್ರೊಸೆಸ್‌ಗಳನ್ನ ಚಾರ್ಜ್ ಯಿಲ್ಲದೇನೆ ಕೊಡಬೇಕು.

1884ನೇ ಇಸವಿ ಸೆಪ್ಟೆಂಬರ್ 13ನೇ ಮರಕುಂ ರೂಲ್ ಆಫ ಪ್ರಾಕ್ಟಿಸ್ ನಂಬರ್ 35.

1884ನೇ ಇಸವಿ ಏಪ್ರೆಲ್ 2ನೇ ಮರ್ಕುಂ 32ನೇ ನಂಬರ್ ಕ್ರಿಮಿನಲ್ ರೂಲ್ ಆಫ್ ಪ್ರಾಕ್ಟಿಸಿಗೆ ಜಂಟಿಸಿ ಯಿರುವ ಷೆಡ್ಯೂಲಿನ 1—2ನೇ ಕಲಂಗಳಲ್ಲಿ "ಆಜುಬಾಜು" ಯಂಬ ಮಾತುಗಳ ತರುವಾಯ "ಸುತ್ತಲು 5 ಮೈಲ್ ಫಾಸಲೆ ಒಳಗಿನ" ಯಂಬ ಮಾತುಗಳನ್ನು ಶೇರಿಸಬೇಕೆಂದು ಗವರ್ನಮೆಂಟಿನವರ ಸಾಂಕ್ಷರ್ಷ ಮೇರೆ ಚೀಫ್ ಕೋರ್ಟ್‌ನವರು ಹುಕುಂ ಮಾಡುತ್ತಾರೆ.